# ಶಾಲೆಯಲ್ಲಿ ಸಾಂವಿಧಾನಿಕ ಮೌಲ್ಯಗಳು-ಸದ್ಭಾವನಾ ಶಾಲಾ ಕಾರ್ಯಕ್ರಮ

ಸುರೇಶ್ ಸಾಹು

ಅಜೀಂ ಪ್ರೇಮ್‌ಜಿ ಫೌಂಡೇಷನ್, ಛತ್ತೀಸ್‌ಗಢದ ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳ (State Council for Educational Research and Training - SCERT)ಯ ಸಹಯೋಗದೊಂದಿಗೆ ಸದ್ಭಾವನಾ ಶಾಲಾ ಕಾರ್ಯಕ್ರಮವನ್ನು ಆರಂಭಿಸಿದೆ. ಈ ಕಾರ್ಯಕ್ರಮದಲ್ಲಿ ಭಾಗಿಯಾಗುವ ಶಾಲೆಗಳ ತರಗತಿ ಮತ್ತು ಶಾಲಾ ಅಭ್ಯಾಸಕ್ರಮಗಳಲ್ಲಿ 'ಸದ್ಭಾವನಾ' ಮೌಲ್ಯಗಳನ್ನು ಉತ್ತೇಜಿಸುವುದು ಇದರ ಹಿಂದಿನ ಉದ್ದೇಶ. ಪ್ರಾತಿನಿಧಿಕ ಕಾರ್ಯಕ್ರಮವನ್ನು (pilot programme) ಛತ್ತೀಸ್‌ಗಡ್‌ನ ಆರು ಜಿಲ್ಲೆಗಳ ೧೮೩ ಶಾಲೆಗಳಲ್ಲಿ ಅನುಷ್ಠಾನಕ್ಕೆ ತರಲಾಗಿದೆ.

ಛತ್ತೀಸ್‌ಗಢದ ಸಣ್ಣ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿನಿಯೊಬ್ಬಳು, 'ತನ್ನ ಗ್ರಾಮದ ಅತ್ಯಾಪ್ತ ಗೆಳತಿಯನ್ನು ತನ್ನ ಮನೆಗೆ ಕರೆದುಕೊಂಡು ಹೋಗಲು ಆಗದಿರುವ ಬಗ್ಗೆ ನನಗೆ ಅತ್ಯಂತ ಬೇಸರವಾಗುತ್ತಿದೆ' ಎಂದು ಹೇಳುತ್ತಾಳೆ. ಆಕೆ ಮುಂದುವರಿದು ಹೇಳುತ್ತಾಳೆ; "ನಾವು ಶಾಲೆಯಲ್ಲಿ ಒಟ್ಟಿಗೆ ಕುಳಿತುಕೊಳ್ಳುತ್ತೇವೆ, ಜೊತೆಯಲ್ಲಿ ಓದುತ್ತೇವೆ ಮತ್ತು ಜೊತೆಯಲ್ಲಿಯೇ ಕುಳಿತು ಊಟ ಮಾಡುತ್ತೇವೆ'. ಆದರೆ ತನ್ನದೇ ಜಾತಿಗೆ ಸೇರಿದ ಇತರ ಸ್ನೇಹಿತೆಯರನ್ನು ಮನೆಗೆ ಕರೆದುಕೊಂಡು ಹೋದ ಹಾಗೆ ನೆಚ್ಚಿನ ಗೆಳತಿಯನ್ನು ಕರೆದುಕೊಂಡು ಹೋಗಲು ಸಾಧ್ಯವಾಗುತ್ತಿಲ್ಲ. ಯಾಕೆಂದರೆ ಆಕೆ ಕೆಳ ಜಾತಿಗೆ ಸೇರಿದವಳು!" ಹಿರಿಯ ಮಾಧ್ಯಮಿಕ ಶಿಕ್ಷಣವನ್ನು ಪಡೆದಿರುವ ಆಕೆಯ ತಾಯಿ ಪ್ರತಿಯೊಬ್ಬರೂ ಸಮಾನರು ಎಂದು ಹೇಳುತ್ತಾರೆ. ಆದರೆ ಆಕೆಯ ಕುಟುಂಬದ ಇತರರು ಮಾತ್ರ ಬೇರೆ ರೀತಿಯಲ್ಲಿ ಯೋಚನೆ ಮಾಡುವುದರಿಂದ ಅವಳು ತನ್ನ ಆಪ್ತ ಗೆಳತಿಯನ್ನು ಮನೆಗೆ ಕರೆದುಕೊಂಡು ಹೋಗಲು ಸಾಧ್ಯವಾಗುತ್ತಿಲ್ಲ. ಒಂದು ವೇಳೆ ಈ ಹುಡುಗಿಯರು ಶಾಲೆಗೆ ಬರದೇ ಹೋಗಿದ್ದರೆ, ಇಬ್ಬರಿಗೂ ಪರಸ್ಪರ ಒಬ್ಬರಿಗೊಬ್ಬರು ಪರಿಚಿತರಾಗುವ ಅವಕಾಶ ಸಿಗುತ್ತಿತ್ತೇ? ಸ್ನೇಹಿತರಾಗಿರುತ್ತಿದ್ದರೆ? ಅಥವಾ ಜಾತಿಯ ಬಗ್ಗೆ ಅವರ ಕುಟುಂಬಕ್ಕಿಂತ ಭಿನ್ನವಾಗಿ ಯೋಚಿಸುತ್ತಿದ್ದರೆ ಮತ್ತು ಈ ರೀತಿಯ ಮೇಲರಿಮೆ ಕೀಳರಿಮೆ ಇರುತ್ತಿತ್ತೇ?

ಶಾಲೆಗಳು, ನಾನಾ ಹಿನ್ನೆಲೆಗಳಿಂದ ಬಂದಿರುವ ಮಕ್ಕಳು, ಜೊತೆಯಾಗಿ ಕಲಿತು ಪರಸ್ಪರರ ಸಾಮ್ಯತೆ ವ್ಯತ್ಯಾಸಗಳನ್ನು ಮೆಚ್ಚುತ್ತಾ, ಆ ಮೂಲಕ ಪರಸ್ಪರರನ್ನು ಅರ್ಥಮಾಡಿಕೊಳ್ಳುವ, ಅನುಭವ ಪಡೆಯುವ ಮತ್ತು ಸಮಾಜದಲ್ಲಿರುವ ಪೂರ್ವಾಗ್ರಹಗಳು, ತಾರತಮ್ಯಗಳು ಹಾಗೂ ನಾನಾ ರೀತಿಯ ಹಿಂಸೆಗಳನ್ನು ತೊಡೆದು ಹಾಕುವ ಸಾಮರ್ಥ್ಯ ಕಲ್ಪಿಸುವ ತಾಣಗಳು. ೨೦೦೯ರಲ್ಲಿ ಜಾರಿಗೆ ಬಂದ ಶಿಕ್ಷಣದ ಹಕ್ಕು (ಆರ್.ಟಿ.ಇ) ಕಾಯ್ದೆಯೂ ಎಲ್ಲಾ ಮಕ್ಕಳೂ ಶಾಲೆಗೆ ಹೋಗುವ ಅವರ ಹಕ್ಕನ್ನು, ಅದೇ ರೀತಿ ಅವರೆಲ್ಲರನ್ನೂ ಪ್ರೀತಿ ಮತ್ತು ಕಾಳಜಿಯಿಂದ ಕಾಣಬೇಕಿರುವ ಹಾಗೂ ಸಮಾನತೆ ಮತ್ತು ಘನತೆಯಿಂದ ನಡೆಸಿಕೊಳ್ಳಬೇಕೆಂಬುದನ್ನೂ ಖಾತರಿಗೊಳಿಸಿದೆ. ೨೦೦೫ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (National Curriculum Framework- NCF) ತನ್ನ 'ಶಿಕ್ಷಣದ ಗುರಿಗಳು' ಕುರಿತ ವಿಭಾಗದಲ್ಲಿ ಶಿಕ್ಷಣವನ್ನು ವಿಮೋಚನಾ ಪ್ರಕ್ರಿಯೆಗಳು ಎಂದು ಪರಿಗಣಿಸಲಾಗಿದ್ದು, ಇಲ್ಲಿ ಶಿಕ್ಷಣದ ಪ್ರಕ್ರಿಯೆಗಳು ಎಲ್ಲ ರೀತಿಯ ಶೋಷಣೆ ಮತ್ತು ಅನ್ಯಾಯ ( ಉದಾಹರಣೆಗೆ, ಬಡತನ, ಲಿಂಗ ತಾರತಮ್ಯ, ಜಾತಿ ಮತ್ತು ಕೋಮು ಪೂರ್ವಾಗ್ರಹ) ಗಳಿಂದ ಮುಕ್ತವಾಗಿರಬೇಕು ಎಂದು ತಿಳಿಸುತ್ತದೆ.

ಆದಾಗ್ಯೂ, ದೇಶದ ನಾನಾ ಭಾಗಗಳಿಂದ ಬರುತ್ತಿರುವ ಸುದ್ದಿಗಳನ್ನು ಗಮನಿಸಿದರೆ ನಾನಾ ರೀತಿಯ ಬಹಿಷ್ಕಾರ, ತಾರತಮ್ಯ ಹಾಗೂ ಅಸಮಾನ ನಡವಳಿಕೆಗಳು ಶಾಲಾ ಮಕ್ಕಳ ದಿನನಿತ್ಯದ ಭಾಗವಾಗಿ ಹೋಗಿವೆ. ಅವು ಅತ್ಯಂತ ಸೂಕ್ಷ್ಮವೂ ಮತ್ತು ಒರಟಾಗಿಯೂ ಇವೆ ಎಂಬುದು ತಿಳಿದುಬರುತ್ತದೆ. ಅಂತಹ ಕೆಲವು ಉದಾಹರಣೆಗಳು ಇಲ್ಲಿವೆ:

- ಅಡುಗೆ ಮಾಡುವವರ ಜಾತಿ ಮತ್ತು ಇತರ ಕಾರಣಗಳಿಂದ ಮಧ್ಯಾಹ್ನದ ಬಿಸಿಯೂಟ ಮಾಡದೇ ಇರುವುದು.
- ಶಾಲೆಗೆ ಹೋಗುವಾಗ ಬರುವಾಗ ಮತ್ತು ಶಾಲೆಯ ಒಳಗೆ ಹೆಣ್ಣುಮಕ್ಕಳು ಕಿರುಕುಳಕ್ಕೆ ಗುರಿಯಾಗುವುದು ಮತ್ತು ಇದರಿಂದಾಗಿ ಅವರು ಕೆಲವೊಮ್ಮೆ ಶಾಲೆಯನ್ನೇ ತೊರೆಯುವ ಸಾಧ್ಯತೆಗಳು ಇರುವುದು.
- ಅಂಗವಿಕಲತೆ, ದೈಹಿಕ ರೂಪ, ಪಾಲಕರ ವೃತ್ತಿ ಮತ್ತು ಸಾಮಾಜಿಕ– ಆರ್ಥಿಕ ಸ್ಥಾನಮಾನಗಳ ಕಾರಣಕ್ಕೆ ಸಹಪಾಠಿಗಳಿಂದ ಛುಡಾಯಿಸಿಕೊಳ್ಳುವ ಪ್ರಕರಣಗಳು.
- ಸಣ್ಣ ಮಟ್ಟದ ವಾದಗಳು ಹಿಂಸಾತ್ಮಕವಾಗಿ ಬದಲಾಗುತ್ತಿರುವುದು

ವಿವಿಧ ಬಗೆಯ ಬಹಿಷ್ಕಾರ, ತಾರತಮ್ಯ, ಕಿರುಕುಳ ಮತ್ತು ಹಿಂಸೆ ಅನೇಕ ಮಕ್ಕಳ, ಅದರಲ್ಲೂ ಸಾಮಾಜಿಕವಾಗಿ ಅಂಚಿಗೆ ತಳ್ಳಲ್ಪಟ್ಟ ತಳವರ್ಗದ ಮಕ್ಕಳ ಪಾಲಿಗೆ ದಿನನಿತ್ಯದ ಅನುಭವವಾಗಿ ಹೋಗಿವೆ.

ಇಷ್ಟೆಲ್ಲ ಜಾಗತೀಕರಣ ಮತ್ತು ತಂತ್ರಜ್ಞಾನದಿಂದ ಮುಂದುವರಿದಿರುವ ಕಾಲದಲ್ಲಿಯೂ ಕೂಡ ಅನೇಕ ಅವಕಾಶಗಳ ಜೊತೆಗೆ ಹೊಸ ಸವಾಲುಗಳು ಕೂಡ ಹುಟ್ಟಿಕೊಂಡಿವೆ. ಮಕ್ಕಳು ತಮ್ಮನ್ನು ತಾವು ರಕ್ಷಿಸಿಕೊಳ್ಳುವಂತೆ ಸಬಲರನ್ನಾಗಿಸಬೇಕಾಗಿರುವ ಅಂತಹ ಮತ್ತೊಂದು ಕ್ಷೇತ್ರ ಅಂತರ್ಜಾಲ ಪ್ರಪಂಚ (Cyberspace). ತಂತ್ರಜ್ಞಾನದ ಪ್ರಗತಿಯ ಜೊತೆಗೆ ತಪ್ಪು, ದ್ವೇಷಪೂರಿತ, ಪೂರ್ವಾಗ್ರಹಗಳಿಂದ ಕೂಡಿದ ಮಾಹಿತಿಗಳು ಪ್ರವಾಹದೋಪಾದಿಯಲ್ಲಿ ಹರಿದುಬರುತ್ತಿವೆ. ಅವು ಸಾಮಾಜಿಕ ಮಾಧ್ಯಮವನ್ನು ಪ್ರವೇಶಿಸುತ್ತಿರುವುದರಿಂದ ಮಕ್ಕಳು ತಮಗೆ ಬರುವ ಮಾಹಿತಿಗಳನ್ನು ತಾರ್ಕಿಕವಾಗಿ ಪರಿಶೀಲಿಸಿ ಸರಿಯಾದ ನಿರ್ಧಾರಗಳನ್ನು ಕೈಗೊಳ್ಳುವ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಬೇಕಾದ ಅಗತ್ಯವಿರುವ ಎಚ್ಚರಿಕೆ ನೀಡುತ್ತಿವೆ.

## ಸದ್ಭಾವನಾ ಶಾಲಾ ಕಾರ್ಯಕ್ರಮದ ಹುಟ್ಟು


ಶಾಲಾ ಶಿಕ್ಷಣದಲ್ಲಿ ಸಮಾನತೆ ಮತ್ತು ಸಮನ್ವಯತೆಗೆ ಸಂಬಂಧಿಸಿದ ಕಾಳಜಿಗಳನ್ನು ಪರಿಹರಿಸುವ ವಿಶಾಲ ವ್ಯಾಪ್ತಿಯನ್ನು ಮೌಲ್ಯಾಧಾರಿತ ಶಿಕ್ಷಣವು (Value education) ಹೊಂದಿದೆ. 2020ರ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ)ಯು, ಶಿಕ್ಷಣದ ಗುರಿಯು, ಉತ್ಪಾದಕತೆಯಲ್ಲಿ ತೊಡಗಿಕೊಂಡಿರುವ ಮತ್ತು ನಮ್ಮ ಸಂವಿಧಾನದ ಆಶಯದಂತೆ, ಸಮಾನತೆಯ, ಸಮನ್ವಯತೆಯ ಹಾಗೂ ಬಹುತ್ವ ಸಮಾಜವನ್ನು ರಚಿಸುವಂಥ ನಾಗರಿಕರನ್ನು ಕೊಡುಗೆ ನೀಡುವುದಾಗಿದೆ. ಇದರ ಮಾರ್ಗದರ್ಶಿ ತತ್ವಗಳೆಂದರೆ ನೈತಿಕತೆ, ಮಾನವೀಯತೆ ಹಾಗೂ ಸಾಂವಿಧಾನಿಕ ಮೌಲ್ಯಗಳಾದ ಸಹಾನುಭೂತಿ, ಇತರರನ್ನು ಗೌರವಿಸುವುದು, ಸ್ವಚ್ಛತೆ, ಕೃತಜ್ಞತೆ, ಪ್ರಜಾಸತ್ತಾತ್ಮಕ ಸ್ಫೂರ್ತಿ, ಸಾರ್ವಜನಿಕ ಸೊತ್ತಿನ ಬಗ್ಗೆ ಗೌರವ, ವೈಜ್ಞಾನಿಕ ಮನೋಭಾವ, ಸ್ವಾತಂತ್ರ್ಯ, ಜವಾಬ್ದಾರಿ, ಬಹುತ್ವ ಹಾಗೂ ನ್ಯಾಯವಾಗಿವೆ. ಆದಾಗ್ಯೂ ಮೌಲ್ಯ ಶಿಕ್ಷಣ/ ನೀತಿ ಪಾಠ ಎನ್ನುವುದನ್ನು ಶಾಲೆಗಳಲ್ಲಿ ಪಠ್ಯಕ್ರಮ ಭಾಗವಾಗಿ ಬೋಧಿಸಲಾಗುತ್ತಿದ್ದು, ಬಹುತೇಕ ಪಠ್ಯಕ್ಕಷ್ಟೇ ಸೀಮಿತವಾಗಿದೆ. ಮೌಲ್ಯ ಶಿಕ್ಷಣದ ತರಗತಿಯಲ್ಲಿ ಏನನ್ನು ಕಲಿಸಲಾಗುತ್ತದೆಯೋ ಅದಕ್ಕೂ ಶಾಲಾ ಸಂಸ್ಕೃತಿಗೂ ಸಂಬಂಧವೇ ಇಲ್ಲದಂತಾಗಿದೆ.

ನ್ಯಾಯ ಸಮ್ಮತ, ಸಮಾನ, ಮಾನವೀಯ ಮತ್ತು ಸುಸ್ಥಿರ ಸಮಾಜವನ್ನು ರೂಪಿಸುವಲ್ಲಿ ಶಿಕ್ಷಣವು ಅತ್ಯಂತ ಗಮನಾರ್ಹವಾದ ಪಾತ್ರವನ್ನು ನಿರ್ವಹಿಸುತ್ತದೆ. ಒಬ್ಬ ವ್ಯಕ್ತಿಯ ಸಮಗ್ರ ಅಭಿವೃದ್ಧಿಯಾಗುವಂಥ ಸಮಾಜ ಸೃಷ್ಟಿಸುವುದಕ್ಕೆ ಹೆಚ್ಚಿನ ಮಹತ್ತ್ವವನ್ನು ನೀಡುವ ರೀತಿಯಲ್ಲಿ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುವಂತೆ ಜನರನ್ನು ಸನ್ನದ್ಧಗೊಳಿಸುವುದು ಶಿಕ್ಷಣದ ಬಹುಮುಖ್ಯ ಪಾತ್ರವಾಗಿದೆ. ಘನತೆ, ಸ್ವಾತಂತ್ರ್ಯ, ನ್ಯಾಯ, ಶಾಂತಿ ಮುಂತಾದ ಕೆಲವು ಸಾರ್ವತ್ರಿಕವಾಗಿ ಮಾನ್ಯ ಮಾಡಲಾದ ಮೌಲ್ಯಗಳಿವೆ. ಇವುಗಳು ಮನುಷ್ಯನ ನಡವಳಿಕೆಯನ್ನು ನಿರ್ಧರಿಸುವ ಹಾಗೂ ಮಾರ್ಗದರ್ಶನ ನೀಡುವ ನಿಟ್ಟಿನಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ಇವುಗಳು ಸರಿ ಅಥವಾ ತಪ್ಪು ಜೊತೆಗೆ ಆದ್ಯತೆಯ ಪ್ರಜ್ಞೆಯನ್ನು ಹುಟ್ಟಿಸುವ ಆಂತರಿಕ ಸ್ವರೂಪಗಳಾಗಿವೆ. ಮೌಲ್ಯಗಳನ್ನು ವೈಯಕ್ತಿಕ ಮಟ್ಟದಲ್ಲಿ ಹಾಗೂ ಸಮುದಾಯದ ಮಟ್ಟದಲ್ಲಿಯೂ ಕೂಡ ನೋಡಬೇಕಾಗುತ್ತದೆ.

ಛತ್ತೀಸ್‌ಗಢದಲ್ಲಿ ಕೆಲವು ಶಾಲೆಗಳು ತಮ್ಮ ಎಲ್ಲ ಶಾಲೆ ಹಾಗೂ ತರಗತಿಯ ಆಚರಣೆ / ಅಭ್ಯಾಸಕ್ರಮಗಳ ಮೂಲಕ ಸಾಂವಿಧಾನಿಕ ಮೌಲ್ಯಗಳನ್ನು ಅಕ್ಷರಶಃ ಪಾಲಿಸಲು ಮತ್ತು ಸದ್ಭಾವನಾ ಶಾಲಾ ಕಾರ್ಯಕ್ರಮವನ್ನು ಅಳವಡಿಸಿಕೊಳ್ಳಲು ಮುಂದೆ ಬಂದಿವೆ.

## ಸದ್ಭಾವನಾ ಶಾಲಾ ಕಾರ್ಯಕ್ರಮ

ಸದ್ಭಾವನೆ ಎಂದರೆ ಸಮಾಜದಲ್ಲಿ ಶಾಂತಿ, ಸೌಹಾರ್ದತೆ, ಏಕತೆ ಮತ್ತು ಸಮಗ್ರತೆಯನ್ನು ಕಾಯ್ದುಕೊಳ್ಳುವುದು ಎಂದು ಅರ್ಥ. ಗೌರವ, ದಯೆ ಮತ್ತು ಪರಸ್ಪರ ಸಹಕಾರ ಮನೋಭಾವವನ್ನು ಆಧರಿಸಿದ ಸಂಬಂಧಗಳು ಅಂತಹ ಸಮಾಜದ ಅಡಿಪಾಯಗಳಾಗಿವೆ. ಇಂತಹ ಸಾಮರ್ಥ್ಯಗಳನ್ನು ಪೋಷಿಸಿ ಬೆಳೆಸಲು ಶಾಲೆಯನ್ನು ಒಂದು ಸಾಂಸ್ಥಿಕ ವ್ಯವಸ್ಥೆಯಾಗಿ ಪರಿಗಣಿಸುವುದರಿಂದ, ಶಾಲೆ ಮತ್ತು ತರಗತಿಯೊಳಗಿನ ಆಚರಣೆಗಳು ಮುಖ್ಯವಾಗುತ್ತವೆ. ಇಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಜಾತ್ಯತೀತ ಹಾಗೂ ಪ್ರಜಾತಾಂತ್ರಿಕ ವ್ಯವಸ್ಥೆಯ ಮೌಲ್ಯಗಳನ್ನು ಕಲಿತು ಅದರಂತೆ ಬದುಕಲು ಜೊತೆಯಾಗಿ ಕೆಲಸ ಮಾಡುತ್ತಾರೆ. ಆ ಮೂಲಕ ಭಾರತದ ಸಂವಿಧಾನದ ಪೀಠಿಕೆಯಲ್ಲಿ ಹೇಳಿರುವ ದೇಶದ ಏಕತೆ ಮತ್ತು ಸಮಗ್ರತೆಯನ್ನು ಸಾಧಿಸಲು ಸಾಧ್ಯವಾಗುತ್ತದೆ.




ಚಿತ್ರ 1 : ಸದ್ಭಾವನಾ ಶಾಲಾ ಕಾರ್ಯಕ್ರಮದ ಚೌಕಟ್ಟು

## ಮಾರ್ಗದರ್ಶಿ ತತ್ತ್ವಗಳು

ಪಠ್ಯಕ್ರಮದ ಏಕೀಕರಣ (Curricular integration) ಮತ್ತು ಆಗಾಗ ನಡೆಸುವ ಸ್ವಯಂ– ಮೌಲ್ಯಮಾಪನಗಳು, ಈ ಕಾರ್ಯಕ್ರಮದ ಎರಡು ಮುಖ್ಯ ಅಂಶಗಳು. ಪಠ್ಯಕ್ರಮದ ಏಕೀಕರಣದ ಗುರಿ ಏನೆಂದರೆ ಇದನ್ನೊಂದು ಪ್ರತ್ಯೇಕ ಚಟುವಟಿಕೆಯಾಗಿ ಮಾಡುವುದಕ್ಕಿಂತ ಪ್ರತಿದಿನದ ತರಗತಿಯ ಚಟುವಟಿಕೆಯಾಗಿ ಸಂಯೋಜಿಸುವುದು. ಈ ಕಾರ್ಯಕ್ರಮದ ಐದು ಮಾರ್ಗದರ್ಶಿ ತತ್ತ್ವಗಳೆಂದರೆ:

1. ಉಪದೇಶ ಮಾಡುವುದಕ್ಕೆ ಬದಲಾಗಿ ಕಾರ್ಯರೂಪಕ್ಕೆ ತರುವುದು

ಯಾವುದೇ ಮೌಲ್ಯಗಳನ್ನು ಬೋಧಿಸುವುದಕ್ಕಿಂತ ಅವುಗಳನ್ನು ಅನುಸರಿಸುವುದರಿಂದ ಚೆನ್ನಾಗಿ ಅರ್ಥ ಮಾಡಿಕೊಳ್ಳಬಹುದು ಎಂಬುದು ಎಲ್ಲರಿಗೂ ತಿಳಿದಿರುವ ವಿಚಾರ. ಹಾಗಾಗಿ ಕಾರ್ಯಕ್ರಮದ ಆದ್ಯತೆ ಏನೆಂದರೆ ಈ ಮೌಲ್ಯಗಳನ್ನು ಕಲಿತುಕೊಳ್ಳುವುದು ಮಾತ್ರವಲ್ಲದೆ ಶಾಲೆಯಲ್ಲಿ ಪರಸ್ಪರ ಎಲ್ಲ ಸಂವಹನಗಳು ಮತ್ತು ಚಟುವಟಿಕೆಗಳಲ್ಲಿ ಆಚರಣೆ ಮಾಡುವುದು. ಶಾಲಾ ಅಸೆಂಬ್ಲಿ ಸಭೆ, ಮಧ್ಯಾಹ್ನದ ಬಿಸಿಯೂಟ (ಎಂಡಿಎಂ), ವಿದ್ಯಾರ್ಥಿಗಳು ಸಹಪಾಠಿಗಳೊಂದಿಗಿನ ಸಂಬಂಧಗಳು, ವಿದ್ಯಾರ್ಥಿ–ಶಿಕ್ಷಕ ಸಂಬಂಧಗಳು, ತರಗತಿಯ ನಿರ್ವಹಣೆ ಇತ್ಯಾದಿ ವಿಚಾರಗಳಿಗೆ ಸಂಬಂಧಿಸಿ ವಾಸ್ತವ ಆಚರಣೆಗಳನ್ನು ಗುರುತಿಸಲಾಗಿದ್ದು ಇವನ್ನು ಶಾಲೆಗಳು ಕ್ರಮೇಣ ತಮ್ಮ ಶಾಲಾ ಸಂಸ್ಕೃತಿಯ ಭಾಗವಾಗಿ ಮಾಡಿಕೊಳ್ಳಲಿವೆ.

2. ಶಾಲೆ ಮತ್ತು ತರಗತಿಯ ಎಲ್ಲ ಚಟುವಟಿಕೆಗಳಲ್ಲಿ ತಡೆರಹಿತ ಏಕೀಕರಣ

ಯಾವುದೇ ಒಂದು ವಿಶೇಷ ಕಾರ್ಯಕ್ರಮವಿರಲಿ, ಅದು ವಿಶೇಷ ಚಟುವಟಿಕೆ, ಪಠ್ಯಕ್ರಮ ಅಥವಾ ಒಂದು ಕಾರ್ಯಕ್ರಮಕ್ಕೆ

ಸೀಮಿತಗೊಳ್ಳುತ್ತದೆ. ಯಾವುದೇ ರೀತಿಯಲ್ಲಿ ಅರ್ಥಪೂರ್ಣವಾದ ಪರಿಣಾಮವನ್ನು ಹೊಂದಬೇಕಾದರೆ ಸದ್ಭಾವನಾ ಶಾಲಾ ಕಾರ್ಯಕ್ರಮವು ಎಲ್ಲ ಶಾಲೆ ಮತ್ತು ತರಗತಿ ಚಟುವಟಿಕೆಗಳಲ್ಲಿ ತಡೆರಹಿತವಾಗಿ ಸೇರ್ಪಡೆಗೊಳ್ಳಬೇಕು. ಪಠ್ಯಕ್ರಮ ಏಕೀಕರಣವು ಅಂಥ ಒಂದು ಕಾರ್ಯತಂತ್ರವಾಗಿದೆ. ಇದನ್ನು ಪ್ರತ್ಯೇಕವಾದ ಚಟುವಟಿಕೆಯಾಗಿ ನಡೆಸುವ ಬದಲು, ದಿನನಿತ್ಯದ ತರಗತಿ ಚಟುವಟಿಕೆಗಳಲ್ಲಿ ಸಂಯೋಜಿಸುವುದು.

3. ಎಲ್ಲ ಭಾಗೀದಾರರ ಸಹಭಾಗಿತ್ವದ ಪ್ರಯತ್ನ

ಈ ಕಾರ್ಯಕ್ರಮದ ಅನುಷ್ಠಾನದಲ್ಲಿ ಶಾಲೆಯು ಒಂದು ತಂಡವಾಗಿ ಕೆಲಸ ಮಾಡಬೇಕು ಮತ್ತು ಉದ್ದೇಶಗಳನ್ನು ಈಡೇರಿಸುವ ಸಲುವಾಗಿ ನಿಯಮಿತವಾಗಿ ಮಾತುಕತೆ ನಡೆಸಬೇಕು ಮತ್ತು ಪರಸ್ಪರ ಸಹಮತವನ್ನು ರೂಪಿಸಿಕೊಳ್ಳಬೇಕು. ಸಂಬಂಧಿಸಿದ ಕಾರ್ಯಕರ್ತರಿಂದ ಬೆಂಬಲವನ್ನು ಗಳಿಸುವುದು ಕೂಡ ಈ ಕಾರ್ಯಕ್ರಮದ ಯಶಸ್ಸಿನಲ್ಲಿ ನಿರ್ಣಾಯಕವಾಗಿರುತ್ತದೆ.

4. ದೀರ್ಘಾವಧಿಯ ಬದ್ಧತೆ

ಸಂಸ್ಥೆಯ ಸಂಸ್ಕೃತಿಯ ಒಂದು ಭಾಗವಾಗಿ ಏನಾದರೊಂದನ್ನು ಅಭಿವೃದ್ಧಿಪಡಿಸುವಾಗ ಸಾಕಷ್ಟು ಸಮಯ ಬೇಕಾಗುತ್ತದೆ ಮತ್ತು ತಕ್ಷಣಕ್ಕೆ ಅದರ ಜಾರಿಯನ್ನು ನಿರೀಕ್ಷಿಸುವಂತಿಲ್ಲ. ದೀರ್ಘಾವಧಿಯವರೆಗೆ ನಿರಂತರ ಪ್ರಯತ್ನಗಳನ್ನು ಮಾಡುತ್ತಿರಲೇಬೇಕಾಗುತ್ತದೆ.

5. ನಿರಂತರ ಸ್ವಯಂ–ಮೌಲ್ಯಮಾಪನ

ಕಾಲಕಾಲಕ್ಕೆ ಸ್ವಯಂ–ಮೌಲ್ಯಮಾಪನ ಮಾಡಿಕೊಳ್ಳುವುದರಿಂದ ಶಾಲೆಗಳು ಮಾಡಿರುವ ಸಾಧನೆಗಳನ್ನು ಪ್ರಶಂಸಿಸಲು ಸಹಾಯವಾಗುತ್ತದೆ ಮತ್ತು ಇನ್ನಷ್ಟು ಪ್ರಯತ್ನಗಳನ್ನು ಮಾಡಬೇಕಾದ ಕ್ಷೇತ್ರಗಳನ್ನು ಗುರುತಿಸಿಕೊಳ್ಳಲು ಸಾಧ್ಯವಾಗುತ್ತದೆ.

## ಕಾರ್ಯನಿರ್ವಹಿಸುವ ಕ್ಷೇತ್ರ

ಪ್ರತಿದಿನದ ಶಾಲಾ ಚಟುವಟಿಕೆಗಳಲ್ಲಿ ಸಾಮರ್ಥ್ಯ ಮತ್ತು ಮನೋಧರ್ಮಗಳನ್ನು ರೂಪಿಸುವಲ್ಲಿ ಕೆಲಸ ಮಾಡಲು ನಾಲ್ಕು ಮುಖ್ಯ ಕ್ಷೇತ್ರಗಳನ್ನು ಗುರುತಿಸಲಾಗಿದೆ.

1. ಕಾಳಜಿಪೂರ್ಣ, ಸಹಯೋಗದಿಂದ ಕೂಡಿದ ಮತ್ತು ಸಮನ್ವಯವನ್ನೊಳಗೊಂಡ ಶಾಲಾ ಸಂಸ್ಕೃತಿಯನ್ನು ರೂಪಿಸುವುದು.
2. ಶಾಲೆಗಳಲ್ಲಿ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಸುರಕ್ಷತೆಯನ್ನು ಖಾತರಿಪಡಿಸುವುದು.
3. ಸಿದ್ಧಮಾದರಿಗಳನ್ನು ಮುರಿಯುವುದು.
4. ಸಮುದಾಯಗಳಿಗೂ ಈ ಮೌಲ್ಯಗಳನ್ನು ವಿಸ್ತರಿಸುವುದು.

### ಕ್ಷೇತ್ರ-1:

### ಕಾಳಜಿಪೂರ್ಣ, ಸಹಯೋಗದಿಂದ ಕೂಡಿದ ಮತ್ತು ಸಮನ್ವಯವನ್ನೊಳಗೊಂಡ ಶಾಲಾ ಸಂಸ್ಕೃತಿಯನ್ನು ರೂಪಿಸುವುದು.

ಸಾಮಾಜಿಕ ಹಾಗೂ ಕಲಿಕಾ ಪ್ರಕ್ರಿಯೆಯಲ್ಲಿ ಎಲ್ಲರನ್ನೂ ಒಳಗೊಳ್ಳುವ ವಾತಾವರಣದಲ್ಲಿ ಮಾತ್ರ ಉತ್ತಮ ಕಲಿಕೆ ಸಾಧ್ಯವಾಗುತ್ತದೆ. ಇದಕ್ಕೆ ಎಲ್ಲರ ಸಹಕಾರ ಮತ್ತು ಸಹಯೋಗದ ಅಗತ್ಯವಿರುತ್ತದೆ ಹಾಗೂ ಪ್ರತಿಯೊಬ್ಬರಿಗೂ ತಮ್ಮ ಕಾಳಜಿ ವಹಿಸಲಾಗುತ್ತಿದೆ ಮತ್ತು ವಿಭಿನ್ನ ಹಿನ್ನೆಲೆಗಳು ಮತ್ತು ಅಭಿಪ್ರಾಯಗಳಿಗೆ ತೆರೆದುಕೊಳ್ಳಲಾಗಿದೆ ಎಂಬ ಭಾವನೆ ಬರುವಂತಾಗಬೇಕು. ಇದು ಒಂದು ತಂಡವಾಗಿ ಕೆಲಸ ಮಾಡುವ ಅವಕಾಶಗಳನ್ನೂ ಒದಗಿಸುತ್ತದೆ ಮತ್ತು ವಿದ್ಯಾರ್ಥಿಗಳು ಮುಂದೆ ತಮ್ಮ ಚಿಂತನೆಗಳು ಮತ್ತು ಅಭಿಪ್ರಾಯಗಳನ್ನು ಹೇಗೆ ವ್ಯಕ್ತಪಡಿಸಬೇಕು ಹಾಗೂ ಸಮರ್ಥಿಸಿಕೊಳ್ಳಬೇಕು ಎಂಬುದನ್ನು ಕಲಿಯುವುದರಿಂದ ನಾನಾ ಸಂದರ್ಭಗಳನ್ನು ವಿಶ್ಲೇಷಿಸಲು, ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಜೊತೆಗೆ ಇದು ವಿದ್ಯಾರ್ಥಿಗಳಿಗೆ ಜ್ಞಾನವನ್ನು ಕಟ್ಟಿಕೊಳ್ಳಲು ತಮ್ಮದೇ ಆದ ಚೌಕಟ್ಟನ್ನು ಬೆಳೆಸಿಕೊಳ್ಳಲು ಅವಕಾಶವನ್ನು ನೀಡುತ್ತದೆ. ಸಹಯೋಗ, ಸಂವಹನ ಮತ್ತು ನಮ್ಯತೆ ಈ ಕ್ಷೇತ್ರದ ಮೂರು ಪ್ರಮುಖ ಕೌಶಲಗಳು.

**ಸಹಯೋಗ:** ವಿವಿಧ ಲಿಂಗ, ಜಾತಿ, ಧರ್ಮ, ಶೈಕ್ಷಣಿಕ ಹಾಗೂ ಇತರ ಸಾಮರ್ಥ್ಯಗಳನ್ನು ಹೊಂದಿದ ವಿದ್ಯಾರ್ಥಿಗಳ ನಡುವಿನ ಸಹಯೋಗ ಇನ್ನಷ್ಟು ಸಂಗತಿಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ಪರಸ್ಪರ ಗೆಳೆತನ ಬೆಳೆಸಲು ಅವಕಾಶಗಳನ್ನು ನೀಡುತ್ತದೆ. ಇಂತಹ ಅವಕಾಶಗಳು ಇನ್ನಷ್ಟು ಅರಿತುಕೊಳ್ಳಲು ವಿದ್ಯಾರ್ಥಿಗಳಿಗೆ ಸಹಾಯ ಮಾಡುವುದು ಮಾತ್ರವಲ್ಲದೆ ಅವರು ಗುಂಪುಗಳಲ್ಲಿ ಕೆಲಸ ಮಾಡುವ ಕೌಶಲಗಳನ್ನು ಬೆಳೆಸಿ–ಕೊಳ್ಳುವಂತೆ ಮಾಡುತ್ತದೆ.

**ಸಂವಹನ:** ಸಂವೇದನೆ ಮತ್ತು ಪರರ ಬಗ್ಗೆ ಪರಾನುಭೂತಿಯೊಂದಿಗೆ ಸಂವಹನ ನಡೆಸುವುದು ಬಹುಮುಖ್ಯ ಕೌಶಲವಾಗಿದ್ದು ಅದು ಮಕ್ಕಳು ತಮ್ಮ ಭಾವನೆಗಳನ್ನು ಮತ್ತು ಯೋಚನೆಗಳನ್ನು ಇನ್ನೊಬ್ಬರೊಂದಿಗೆ ಅಭಿವ್ಯಕ್ತಗೊಳಿಸಲು ಹಾಗೂ ಪರಸ್ಪರ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳಲು ಸಹಕಾರಿ.

**ನಮ್ಯತೆ:** ಬದಲಾಗುತ್ತಿರುವ ವಿಭಿನ್ನ ವಿದ್ಯಮಾನ ಮತ್ತು ವಾತಾವರಣವನ್ನು ಅಳವಡಿಸಿಕೊಳ್ಳುವ ಸಾಮರ್ಥ್ಯ.

- ಶಾಲೆಗಳಲ್ಲಿ ಪ್ರೋತ್ಸಾಹ ನೀಡಲು ನಿರ್ಧರಿಸಿರುವ ಕೆಲವು ಆಚರಣೆಗಳೆಂದರೆ: ವಿದ್ಯಾರ್ಥಿಗಳ ನಾನಾ ಸಮಿತಿಗಳ ಮೂಲಕ, ನಿಯಮಗಳನ್ನು ರೂಪಿಸುವಲ್ಲಿ, ಕಾರ್ಯಕ್ರಮಗಳನ್ನು ಯೋಜಿಸುವಲ್ಲಿ, ಶಾಲಾ ನಿರ್ವಹಣೆಯಲ್ಲಿ ಮತ್ತಿತರ ಕಾರ್ಯಗಳಲ್ಲಿ ಸಮುದಾಯ ಸದಸ್ಯರು ಪಾಲ್ಗೊಳ್ಳುವಂತೆ ಮಾಡುವಲ್ಲಿ ವಿದ್ಯಾರ್ಥಿ ಸಂಘಟನೆ ಭಾಗಿಯಾಗುವಂತೆ ಮಾಡುವ ಮೂಲಕ ಧನಾತ್ಮಕ ಸಹಯೋಗದ ತರಗತಿ ಮತ್ತು ಶಾಲಾ ಸಂಸ್ಕೃತಿಯನ್ನು ಅಭಿವೃದ್ಧಿಪಡಿಸುವುದು.
- ಅತ್ಯುತ್ತಮ ವಿದ್ಯಾರ್ಥಿಗಳ ಕಾರ್ಯವನ್ನು ಮಾತ್ರವಲ್ಲದೆ ಎಲ್ಲ ವಿದ್ಯಾರ್ಥಿಗಳ ಕೆಲಸವನ್ನು ಪ್ರದರ್ಶಿಸುವ ನಿಷ್ಪಕ್ಷಪಾತ ಪ್ರಕ್ರಿಯೆಯನ್ನು ಅನುಸರಿಸುವುದು.
- ಎಲ್ಲ ಧರ್ಮಗಳ ಹಬ್ಬಗಳನ್ನು ಆಚರಿಸುವ ಮೂಲಕ ಪ್ರಜಾಸತ್ತಾತ್ಮಕ ಹಾಗೂ ಪರಾನುಭೂತಿ ಸಂಸ್ಕೃತಿಯನ್ನು ಬೆಳೆಸುವುದು.
- ವಿದ್ಯಾರ್ಥಿಗಳ ಅಥವಾ ಶಿಕ್ಷಕರ ಜಾತಿ, ಸಮಾಜೋ–ಆರ್ಥಿಕ ವರ್ಗ, ಲಿಂಗ, ಧರ್ಮ, ಆಹಾರ ಅಭ್ಯಾಸಗಳು, ಸಾಮರ್ಥ್ಯ ಅಥವಾ ಬುದ್ಧಿವಂತಿಕೆಯ ಆಧಾರದಲ್ಲಿ ಶಾಲೆಯಲ್ಲಿ ಯಾವುದೇ ರೀತಿಯ ತಾರತಮ್ಯವನ್ನು ವ್ಯಕ್ತಪಡಿಸುವ ಅಥವಾ ಧ್ವನಿಸುವ ಅಭ್ಯಾಸವನ್ನು ಅನುಸರಿಸದೇ ಇರುವುದು.
- ಸಮುದಾಯ ಹಾಗೂ ಆರೈಕೆದಾರರು/ಪಾಲಕರ ಜೊತೆಗೆ ಸಕ್ರಿಯವಾದ ಮತ್ತು ತೊಡಗಿಸಿಕೊಳ್ಳುವ ಸಂಬಂಧವನ್ನು ಕಾಯ್ದುಕೊಳ್ಳುವುದು.

### ಕ್ಷೇತ್ರ-2:

ಶಾಲೆಗಳಲ್ಲಿ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ **ಸುರಕ್ಷತೆಯನ್ನು ಖಾತರಿಪಡಿಸುವುದು.** ಶಾಲೆಯಲ್ಲಿರುವ ಅಸುರಕ್ಷಿತ, ನಿಂದನೆ, ತಾರತಮ್ಯ ಮತ್ತು ಹಿಂಸೆಯಿಂದ ಕೂಡಿದ ವಾತಾವರಣ ಮಕ್ಕಳ ಶೈಕ್ಷಣಿಕ ಪ್ರಗತಿಗೆ ತಡೆಯುಂಟು–ಮಾಡುತ್ತದೆ. ಇದು ಮಕ್ಕಳು ಶಾಲೆಯನ್ನೇ ತೊರೆಯುವಂತೆ ಮಾಡಬಹುದು. ಇಂತಹ ವಾತಾವರಣವು ಮಕ್ಕಳ ಸ್ವಾಭಿಮಾನ ಮತ್ತು ಆತ್ಮವಿಶ್ವಾಸವನ್ನು ಕುಗ್ಗಿಸಬಹುದು ಮತ್ತು ಇತರರನ್ನು ಇದೊಂದು ಸಾಮಾನ್ಯ ಮತ್ತು ಸಮ್ಮತಾರ್ಹ ಸಾಮಾಜಿಕ ನಡವಳಿಕೆಯ ಭಾಗ ಎಂದು ಯೋಚಿಸುವಷ್ಟು ಸಂವೇದನಾರಹಿತರನ್ನಾಗಿ ಮಾಡಬಹುದು. ಹಾಗಾಗಿ ಶಾಲೆಯು ಯಾವುದೇ ಶಿಕ್ಷೆ ಇಲ್ಲದ, ಬೆದರಿಕೆ, ಕಿರುಕುಳ, ಭಯ ಹುಟ್ಟಿಸುವ ಅಥವಾ ಶಾಲಾ ಆವರಣದಲ್ಲಿ ಅವಹೇಳನಕಾರಿ ಭಾಷೆಯನ್ನು ಬಳಸುವ ವಾತಾವರಣದ ಬದಲಿಗೆ ಧನಾತ್ಮಕ ವಾತಾವರಣವನ್ನು ಕಲ್ಪಿಸಬೇಕಾದ ಅಗತ್ಯವಿರುತ್ತದೆ. ಇದರೊಂದಿಗೆ ಶಾಲೆಯು ಸುರಕ್ಷಿತವಾದ ಕುಡಿಯುವ ನೀರು, ಸ್ವಚ್ಛ ಶೌಚಾಲಯ ಮತ್ತು ಕಡಿಮೆ ಅವಘಡ ಹಾಗೂ ಅಪಾಯಗಳ ಸುರಕ್ಷಿತ ಆಟದ ಮೈದಾನವನ್ನು ಒಳಗೊಂಡ ಸುರಕ್ಷಿತವಾದ ಭೌತಿಕ ವಾತಾವರಣವನ್ನು ಕೂಡ ಕಲ್ಪಿಸಬೇಕಾದ ಅಗತ್ಯ ಕೂಡ ಇರುತ್ತದೆ. ಶಾಲಾ ಆಡಳಿತ ಮಂಡಳಿ ನಿಗಾ ವಹಿಸಬೇಕಾದ ಮತ್ತೊಂದು ಮುಖ್ಯ ಸಂಗತಿ ಎಂದರೆ ಆನ್ಲೈನ್ ಸುರಕ್ಷತೆ. ಮೊಬೈಲ್ ಹಾಗೂ ಇಂಟರ್ನೆಟ್ ರೂಪದಲ್ಲಿ ಮಕ್ಕಳ ಬದುಕಿನಲ್ಲಿ ಪ್ರವೇಶ ಪಡೆಯುತ್ತಿರುವ ತಂತ್ರಜ್ಞಾನದ ಅಪಾಯದಿಂದ ಮಕ್ಕಳನ್ನು ರಕ್ಷಿಸಬೇಕಾಗಿದೆ.

### ಸಂವೇದನಾ ಶೀಲತೆ ಮತ್ತು ಸಹಾನುಭೂತಿ

ಈ ಕ್ಷೇತ್ರದಲ್ಲಿ ಈ ಎರಡೂ ಮೌಲ್ಯಗಳು ಅತ್ಯಂತ ಪ್ರಮುಖವಾಗಿವೆ. ತಮ್ಮ ಮಾತು ಮತ್ತು ಕ್ರಿಯೆಗಳು ಹೇಗೆ ಇತರರ ಮೇಲೆ ಪರಿಣಾಮ ಬೀರಬಹುದು ಮತ್ತು ಅವರ ಭಾವನೆಗಳಿಗೆ ಧಕ್ಕೆ ಉಂಟು ಮಾಡಬಹುದು ಎಂಬುದನ್ನು ಮಕ್ಕಳು ಅರ್ಥ ಮಾಡಿಕೊಳ್ಳಲು ಇದರಿಂದ ಸಾಧ್ಯವಾಗುತ್ತದೆ. ಇದರಿಂದ ಅವರು ಇತರರ ಯೋಚನೆಗಳು ಮತ್ತು ಭಾವನೆಗಳನ್ನು ಶ್ಲಾಘಿಸುವ ಸಾಮರ್ಥ್ಯವನ್ನು ಪಡೆದುಕೊಳ್ಳುತ್ತಾರೆ.

### ಸ್ವಯಂ-ಜಾಗೃತಿ

ಮಕ್ಕಳು ತಮ್ಮನ್ನು ತಾವು ಚೆನ್ನಾಗಿ ಅರ್ಥ ಮಾಡಿಕೊಳ್ಳುವುದರಿಂದ ಸ್ವಾಭಿಮಾನವನ್ನು ಬೆಳೆಸಿಕೊಳ್ಳಲು ಸುಲಭವಾಗುತ್ತದೆ. ಶಾಲೆಯಲ್ಲಿ ಅಥವಾ ಇತರ ಮಕ್ಕಳೊಂದಿಗಿನ ಗೆಳೆತನದಲ್ಲಿ ಸಮಸ್ಯೆಗಳನ್ನು ಎದುರಿಸುವ ಮಕ್ಕಳಿಗೆ ಇದು ಅತ್ಯಂತ ಅಗತ್ಯ ಕೂಡ.

### ಸ್ವಯಂ-ನಿರ್ವಹಣೆ

ಇದರಿಂದ ಮಕ್ಕಳು ತಮ್ಮ ನಡವಳಿಕೆಗಳನ್ನು ಪರಿವರ್ತಿಸಿಕೊಳ್ಳಲು, ಕೋಪದಂತಹ ಭಾವನೆಗಳನ್ನು ನಿಯಂತ್ರಿಸಿಕೊಳ್ಳಲು ಸಹಾಯವಾಗುತ್ತದೆ. ಇದು ಮಕ್ಕಳು ತಮ್ಮ ಸವಾಲುಗಳನ್ನು ಅರ್ಥಮಾಡಿಕೊಳ್ಳಲು ಅವಕಾಶವನ್ನು ನೀಡುವುದು ಮಾತ್ರವಲ್ಲದೆ, ಅವರು ಯಾವುದನ್ನು ಉತ್ತಮವಾಗಿ ನಿರ್ವಹಣೆ ಮಾಡುತ್ತಾರೆ ಎಂಬ ಪ್ರಜ್ಞೆಯನ್ನೂ ಅವರಲ್ಲಿ ಮೂಡಿಸುತ್ತದೆ. ತನ್ನ ಹಾಗೂ ಇತರರ ಭಾವನೆಗಳು ವೈಯಕ್ತಿಕ ನಡವಳಿಕೆಯ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಉದಾಹರಣೆಗೆ, ಸ್ವಯಂ ನಿಯಂತ್ರಣದಂತಹವುಗಳು ಅವರನ್ನು ಸಶಕ್ತರನ್ನಾಗಿಸುತ್ತವೆ ಮತ್ತು ಅವು ಅತ್ಯಂತ ಅಗತ್ಯ.

ಮೇಲೆ ಪ್ರಸ್ತಾಪ ಮಾಡಿದ ವ್ಯವಸ್ಥೆಗಳು ಮತ್ತು ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸುವ ಆಚರಣೆಗಳನ್ನು ವಾಸ್ತವಕ್ಕೆ ತರಲು ಶಾಲೆಗಳು ನಿರ್ಧರಿಸಿವೆ. ಇಂತಹ ಕಾರ್ಯತಂತ್ರಗಳಿಗೆ ಕೆಲವು ಉದಾಹರಣೆಗಳು ಇಲ್ಲವೆ:

- ಶಾಲೆಯಲ್ಲಿ ಯಾವುದೇ ರೀತಿಯ ದೈಹಿಕ ಶಿಕ್ಷೆಗೆ ಅವಕಾಶವಿಲ್ಲ.
- ಸುರಕ್ಷಿತ ಕುಡಿಯುವ ನೀರು, ಸ್ವಚ್ಛ ಶೌಚಾಲಯಗಳು, ಸುರಕ್ಷಿತ ಹಾಗೂ ಸ್ವಚ್ಛ ತರಗತಿ ಕೊಠಡಿಗಳು,

ಕುಳಿತುಕೊಳ್ಳುವ ವ್ಯವಸ್ಥೆ, ಆಟದ ಮೈದಾನ, ಮಧ್ಯಾಹ್ನದ ಬಿಸಿಯೂಟದ ಏರ್ಪಾಟುಗಳು ಸೇರಿದಂತೆ ವಿದ್ಯಾರ್ಥಿಗಳ ಸುರಕ್ಷತೆಗೆ ಸಂಬಂಧಿಸಿದ ವಿಚಾರಗಳ ಪರಿಶೀಲನೆ ಮತ್ತು ಜಾರಿ.

- ಮಕ್ಕಳಿಗೆ ಸಾಮಾಜಿಕ ಮತ್ತು ಭಾವನಾತ್ಮಕ ಬೆಂಬಲವನ್ನು ನೀಡಲು ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸುವುದು.
- ಸಕ್ರಿಯ ಕಲಿಕೆ–ಆಲೋಚನೆ ಮತ್ತು ಅಭಿವ್ಯಕ್ತಿಗೆ ಉತ್ತೇಜನ ನೀಡುವ ತರಗತಿ ಪ್ರಕ್ರಿಯೆಗಳ ಮೇಲೆ ಗಮನ ಕೇಂದ್ರೀಕರಿಸುವುದು. ತರಗತಿಯೊಳಗಿನ ಕಲಾಪಗಳಲ್ಲಿ ಮಕ್ಕಳು ಚರ್ಚೆ, ಪ್ರಶ್ನೆ ಮಾಡುವುದು ಮತ್ತು ತಾರ್ಕಿಕವಾದ ಚಿಂತನೆಗಳಲ್ಲಿ ತೊಡಗುವಂತೆ ಮಾಡಲು ಉತ್ತೇಜನ ನೀಡುವುದು. ಸ್ವ ವಿಮರ್ಶೆ ಮಾಡಿಕೊಳ್ಳಲು ಅವಕಾಶಗಳನ್ನು ಒದಗಿಸುವುದು.
- ವಿದ್ಯಾರ್ಥಿಗಳು ಹೇಳುವುದನ್ನು ಮತ್ತು ಅವರ ಅಭಿಪ್ರಾಯಗಳ ಬಗ್ಗೆ ಯಾವುದೇ ತೀರ್ಮಾನಕ್ಕೆ ಬರದೆ ಆಸಕ್ತಿಯಿಂದ ಆಲಿಸುವುದರ ಮೂಲಕ ಅವರ ಎಲ್ಲ ಸಂವಹನಗಳಿಗೆ ಗೌರವವನ್ನು ನೀಡುವುದು ಹಾಗೂ ತರಗತಿ ಚಟುವಟಿಕೆಗಳ ಸಂದರ್ಭದಲ್ಲಿ ಗೌರವಪೂರ್ಣವಾದ ನಡವಳಿಕೆ ಮತ್ತು ಭಾಷೆಯನ್ನು ಬಳಸಲು ಅಭ್ಯಾಸ ಮಾಡುವುದು. ಅಂತಹ ನಡವಳಿಕೆಯನ್ನು ಅನುಸರಿಸುವವರನ್ನು ಶ್ಲಾಘಿಸುವ ಮೂಲಕ ಅವರು ಧನಾತ್ಮಕವಾದ ಬಲವರ್ಧನೆಗೆ ಅವಕಾಶವನ್ನು ನೀಡುತ್ತಾರೆ.
- ಮಕ್ಕಳ ಯೋಗಕ್ಷೇಮದ ಬಗ್ಗೆ ಆರೈಕೆ ಮತ್ತು ಕಾಳಜಿಯನ್ನು ವ್ಯಕ್ತಪಡಿಸುವ ಮೂಲಕ ಪರಾನುಭೂತಿ ಪ್ರದರ್ಶಿಸಲು ಮಾದರಿಯಾಗುವುದು ಮತ್ತು ಕಕ್ಕುಲಾತಿಯಿಂದ ಪ್ರತಿಕ್ರಿಯೆ ನೀಡುವುದು.
- ಎಲ್ಲ ವಿದ್ಯಾರ್ಥಿಗಳಿಗೆ ಅವಕಾಶಗಳನ್ನು ನೀಡುವ ಮೂಲಕ ಅವರ ಸ್ವಾಭಿಮಾನವನ್ನು ವೃದ್ಧಿಸುವುದು.
- ಸೈಬರ್ ಬಳಕೆಯಲ್ಲಿ ಸುರಕ್ಷತೆ ಅನುಸರಿಸಲು ಮಕ್ಕಳನ್ನು ಸಶಕ್ತಗೊಳಿಸುವುದು.

## ಕ್ಷೇತ್ರ-3:
## ಸಿದ್ಧ ಮಾದರಿಗಳನ್ನು ಮುರಿಯುವುದು

ಸಿದ್ಧಮಾದರಿಗಳು ಎಂದರೆ ಸಾಮಾನ್ಯೀಕರಣಗೊಂಡ, ರುಜುವಾತು ಪಡಿಸದ ಮತ್ತು ಒಂದು ನಿರ್ದಿಷ್ಟ ಗುಂಪಿನ (ಜಾತಿ, ವರ್ಗ, ಲಿಂಗ ಇತ್ಯಾದಿ) ಜನರ ಬಗ್ಗೆ ಇರುವ ನಂಬಿಕೆಗಳನ್ನು ಪರಿಶೀಲಿಸದೇ ಇರುವುದು. ಇಂತಹ ಅಭಿಪ್ರಾಯಗಳನ್ನು ಸಾಮಾನ್ಯವಾಗಿ ಸಮಾಜದ ಅಲ್ಪಸಂಖ್ಯಾತರು, ಅವಕಾಶ ವಂಚಿತರು ಮತ್ತು ತುಳಿತಕ್ಕೊಳಗಾದವರ ವಿರುದ್ಧ ಬಳಸಲಾಗುತ್ತದೆ. ಇಂತಹವನ್ನು ಬಹಿಷ್ಕಾರ, ತಾರತಮ್ಯ, ದಬ್ಬಾಳಿಕೆ, ಶೋಷಣೆ, ಕಿರುಕುಳ ಮತ್ತು ಹಿಂಸಾಚಾರಗಳನ್ನು ಸಮರ್ಥಿಸಲು ಬಳಸಲಾಗುತ್ತದೆ. ಜಾತಿ, ವರ್ಗ ಮತ್ತು ಲಿಂಗ ತಾರತಮ್ಯ ಶ್ರೇಣಿಗಳಿಂದ ತುಂಬಿರುವ ಸಮಾಜದಲ್ಲಿ ಇಂತಹ ಸಿದ್ಧಮಾದರಿಗಳು ಒಡಕು ಉಂಟುಮಾಡುವಂಥವು ಮತ್ತು ಸ್ವಾತಂತ್ರ್ಯ, ಸಮಾನತೆ, ನ್ಯಾಯ ಮತ್ತು ಭ್ರಾತೃತ್ವದಂತಹ ನಮ್ಮ ಸಂವಿಧಾನವು ಬೆಂಬಲಿಸುವ ಮೌಲ್ಯಗಳಿಗೆ ಧಕ್ಕೆ ತರುವಂಥವುಗಳಾಗಿವೆ.

ಶಿಕ್ಷಕರು ಮತ್ತು ಮಕ್ಕಳು ಇಂತಹ ಸಿದ್ಧಮಾದರಿಗಳಲ್ಲಿ ನಂಬಿಕೆ ಇಟ್ಟಿರುವುದರಿಂದ ಶಾಲೆಗಳಲ್ಲಿ ಅನೇಕ ಸವಾಲುಗಳು ಹುಟ್ಟಿಕೊಳ್ಳುತ್ತವೆ ಮತ್ತು ಇದನ್ನು ಬದಲಾಯಿಸಲು ಸಾಮೂಹಿಕ ಪ್ರಯತ್ನದ ಅಗತ್ಯವಿದೆ. ಉದಾಹರಣೆಗೆ, ಸಾಮಾನ್ಯವಾಗಿ ಚಾಲ್ತಿಯಲ್ಲಿರುವ ಒಂದು ಅಭಿಪ್ರಾಯ ಏನೆಂದರೆ ನಿರ್ದಿಷ್ಟ ಜಾತಿ ಅಥವಾ ವರ್ಗಕ್ಕೆ ಸೇರಿದ ಮಕ್ಕಳು ಶೈಕ್ಷಣಿಕವಾಗಿ ಉತ್ತಮ ಪ್ರಗತಿ ತೋರುವುದಿಲ್ಲ ಎಂಬುದು. ಶಿಕ್ಷಕರ ಒಂದು ಗುಂಪಿನಲ್ಲಿ, ಇಂತಹ ಒಂದು ನಂಬಿಕೆ ಯಾವಾಗ ಮತ್ತು ಹೇಗೆ ರೂಪ ಪಡೆದುಕೊಂಡಿತು ಮತ್ತು ಇದರಿಂದ ಯಾರಿಗೆ ಲಾಭ ಅಥವಾ ನಷ್ಟ ಎಂಬ ಬಗ್ಗೆ ಪರ್ಯಾಲೋಚನೆ ನಡೆಸಬೇಕೆಂದು ಈ ವಿಷಯವನ್ನು ಪ್ರಸ್ತಾಪ ಮಾಡಲಾಯಿತು. ಆಗ ಗುಂಪು ಹಿಂದಿನ ಕಾಲದ ಊಳಿಗಮಾನ್ಯ ವ್ಯವಸ್ಥೆಯಲ್ಲಿ, ಭೂಮಾಲೀಕರು ಕಾರ್ಮಿಕ ವರ್ಗದ ಮಕ್ಕಳು ಶಿಕ್ಷಣದ ಕಾರಣದಿಂದ ತಮ್ಮ ಕೆಲಸವನ್ನು ತೊರೆಯಬಾರದು ಎಂಬ ಕಾರಣಕ್ಕೆ ಅವರು ಶಿಕ್ಷಣವನ್ನು ಪಡೆಯಬಾರದು ಎಂಬ ಯೋಚನೆಗಳಿಗೆ ನೀರೆರೆದರು ಎಂಬ ಅಭಿಪ್ರಾಯಪಟ್ಟಿತು..

ಸಮರ್ಪಕ ಪೂರಕ ವಾತಾವರಣದಿಂದ ಪ್ರತಿಯೊಂದು ಮಗುವೂ ಕೂಡ ಉತ್ತಮ ರೀತಿಯಲ್ಲಿ ಅಧ್ಯಯನ ಮಾಡಲು ಸಾಧ್ಯವಿದೆ ಎಂಬುದನ್ನು ಅರ್ಥ ಮಾಡಿಕೊಳ್ಳುವ ವಿಶ್ಲೇಷಣೆ ಅಗತ್ಯವಿದೆ. ಮಕ್ಕಳಿಗೆ ಕಲಿಯುವ ಅವಕಾಶಗಳನ್ನು ಕಲ್ಪಿಸಬೇಕು ಎಂಬುದು ಸದ್ಭಾವನಾ ಶಾಲಾ ಕಾರ್ಯಕ್ರಮದ ಮುಖ್ಯ ಗುರಿಯಾಗಿದೆ.

ಗೌರವ ಮತ್ತು ಘನತೆ, ತಾರ್ಕಿಕವಾದ ಚಿಂತನೆ, ಸಂವೇದನಾಶೀಲತೆ ಮತ್ತು ಸಹಯೋಗವನ್ನು ವ್ಯವಸ್ಥೆಗೊಳಿಸುವುದು ಈ ಕ್ಷೇತ್ರದ ಬಹುಮುಖ್ಯ ತಿರುಳಾಗಿದೆ. ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಶಾಲೆಗಳ ಕೆಲವು ಆಚರಣೆಗಳನ್ನು ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಗುಂಪುಗೂಡಿಸಲಾಗಿದೆ:

- ಮಧ್ಯಾಹ್ನದ ಬಿಸಿಯೂಟ( ಎಂಡಿಎಂ) ದಂತಹ ಶಾಲಾ ಪ್ರಕ್ರಿಯೆಗಳಲ್ಲಿ ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳು ಜೊತೆಯಲ್ಲಿ ಕೆಲಸ ಮಾಡುವಂತೆ ಮಾಡುವ ಮೂಲಕ ಎಲ್ಲ ಕೆಲಸಗಳಲ್ಲಿ ಲಿಂಗ ಸಮಾನತೆಯನ್ನು ಖಾತರಿಪಡಿಸುವುದು. ಸಾಂಪ್ರದಾಯಿಕ ಪಾತ್ರಗಳು ಮತ್ತು ಚಟುವಟಿಕೆಗಳನ್ನು ಸವಾಲಿಗೆ ಗುರಿಪಡಿಸುವುದು. ಅಂದರೆ ಹೆಣ್ಣುಮಕ್ಕಳು ಫುಟ್ಬಾಲ್ ಮತ್ತು ಕ್ರಿಕೆಟ್‌ನಂತಹ ಆಟಗಳನ್ನು ಆಡುವುದು ಮತ್ತು ಗಂಡುಮಕ್ಕಳನ್ನು ಮಧ್ಯಾಹ್ನದ ಬಿಸಿಯೂಟ ಬಡಿಸುವ ಮತ್ತು ತರಗತಿ ಕೊಠಡಿ ಸ್ವಚ್ಛಗೊಳಿಸುವ ಕೆಲಸಲ್ಲಿ ತೊಡಗಿಸುವುದು.

- ಎಲ್ಲ ಜಾತಿಗೆ ಸೇರಿದ ಮಕ್ಕಳು ಒಂದೇ ಕಡೆ ಕುಳಿತು ಊಟ ಮಾಡುವಂತೆ ಮತ್ತು ಆಟವಾಡುವಂತೆ ಪ್ರೋತ್ಸಾಹ ನೀಡುವ ಮೂಲಕ ಸಮಾನತಾವಾದದ ಶಾಲಾ ಸಂಸ್ಕೃತಿಯನ್ನು ಅನುಷ್ಠಾನಕ್ಕೆ ತರುವುದು. ವಿದ್ಯಾರ್ಥಿಗಳಿಗೆ ಸರದಿಯ ಮೇಲೆ ಕುಳಿತುಕೊಳ್ಳುವ ಸ್ಥಳ ಬದಲಾವಣೆ ಮಾಡುವ ಮೂಲಕ ಪ್ರತಿಯೊಬ್ಬ ವಿದ್ಯಾರ್ಥಿಗೂ ಮೊದಲ ಸಾಲಿನಲ್ಲಿ ಕುಳಿತುಕೊಳ್ಳುವ ಅವಕಾಶ ಕೊಡುವುದು.
- ಶಾಲೆಯ ಅಸೆಂಬ್ಲಿಯಲ್ಲಿ ಜಾತ್ಯತೀತ, ದೇಶಭಕ್ತಿಯ ಹಾಡುಗಳನ್ನು ಹಾಡಲು ಉತ್ತೇಜಿಸುವುದು, ಎಲ್ಲ ಧರ್ಮಗಳ ಪ್ರಮುಖ ಹಬ್ಬಗಳನ್ನು ಆಚರಿಸುವುದು ಇತ್ಯಾದಿ ಕ್ರಮಗಳ ಮೂಲಕ ಶಾಲೆಯಲ್ಲಿ ಜಾತ್ಯತೀತ ವಾತಾವರಣ ನಿರ್ಮಾಣವಾಗುವಂತೆ ಉತ್ತೇಜಿಸುವುದು.
- ಬೋಧನೆ–ಕಲಿಕೆ ಪ್ರಕ್ರಿಯೆಯಲ್ಲಿ ಮತ್ತು ಸಂಬಂಧಿಸಿದ ಎಲ್ಲ ಚಟುವಟಿಕೆಗಳಲ್ಲಿ ಭಾಗಿಯಾಗಲು ಹಾಗೂ ನಾಯಕತ್ವದ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಎಲ್ಲ ಸಾಮಾಜಿಕ–ಆರ್ಥಿಕ ಹಿನ್ನೆಲೆಯ ವಿದ್ಯಾರ್ಥಿಗಳಿಗೆ ಉತ್ತೇಜನವನ್ನು ನೀಡುವುದು. ಅಂತರಶಾಲಾ ಸ್ಪರ್ಧೆಗಳು ಹಾಗೂ ಇತರ ಚಟುವಟಿಕೆಗಳಲ್ಲಿ ಶಾಲೆಯನ್ನು ಪ್ರತಿನಿಧಿಸಲು ಪ್ರೋತ್ಸಾಹಿಸುವುದು.

## ಕ್ಷೇತ್ರ-4
## ಸಮುದಾಯಕ್ಕೆ ವಿಸ್ತರಣೆ

ಶಾಲಾ ಸಂಸ್ಥೆಯಲ್ಲಿ ಪಾಲಕರು ಮತ್ತು ಸಮುದಾಯ ಬಹುಮುಖ್ಯ ಫಲಾನುಭವಿಗಳು. ಶಾಲೆಯ ಆಡಳಿತದಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಖಾತರಿಪಡಿಸಲು ಸಾಂಸ್ಥಿಕ ವ್ಯವಸ್ಥೆಗಳನ್ನು ಮಾಡಲಾಗಿದೆ. ಆದಾಗ್ಯೂ, ಸಮುದಾಯ ಮತ್ತು ಶಾಲೆಯ ನಡುವೆ ಇದಕ್ಕಿಂತ ಇನ್ನೂ ಉತ್ತಮವಾದ ಸಹಯೋಗಕ್ಕೂ ಕೂಡ ಅವಕಾಶವಿದೆ. ಮಕ್ಕಳನ್ನು ಶೈಕ್ಷಣಿಕವಾಗಿ ಬೆಂಬಲಿಸಲು ಬೇಕಾಗಿರುವ ಪಾಲಕರ ಸಾಮರ್ಥ್ಯಗಳ ಬಗ್ಗೆ ಶಿಕ್ಷಕರು ಅರ್ಥ ಮಾಡಿಕೊಳ್ಳುವ ಅಗತ್ಯ ಹೆಚ್ಚಾಗಿದೆ. ಸಮುದಾಯದ ಬೆಂಬಲ ಮತ್ತು ಪಾಲ್ಗೊಳ್ಳುವಿಕೆ ಕಾರ್ಯಕ್ರಮಕ್ಕೆ ಅತ್ಯಗತ್ಯ. ಹಾಗೆಯೇ ಕುಟುಂಬಗಳ ಮಿತಿ ಏನು ಎಂಬುದನ್ನು ಶಿಕ್ಷಕರು ಅರ್ಥಮಾಡಿಕೊಳ್ಳಬೇಕಾಗುತ್ತದೆ ಕೂಡ. ಸ್ಥಳೀಯ ಸನ್ನಿವೇಶ/ ಭಾಷೆಯನ್ನು ಅರ್ಥಮಾಡಿ–ಕೊಳ್ಳುವುದರಿಂದ ಶಿಕ್ಷಕರು ಮಕ್ಕಳೊಂದಿಗೆ ಸುಭದ್ರವಾದ ಸಂಬಂಧವನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ ಮತ್ತು ಇದು ಉತ್ತಮವಾದ ಬೋಧನಾ ವಿಧಾನದ ಕಾರ್ಯತಂತ್ರಗಳನ್ನು ವಿನ್ಯಾಸಗೊಳಿಸಲು ಕೂಡ ಸಹಾಯವಾಗುತ್ತದೆ.

ಎಲ್ಲ ಸಮುದಾಯಗಳು ಪ್ರಗತಿಗಾಮಿ ಹಾಗೂ ಪ್ರತಿಗಾಮಿಯಾದ ಆಚರಣೆಗಳನ್ನು ಹೊಂದಿರುತ್ತವೆ. ಶಾಲೆಯಲ್ಲಿ ಮಕ್ಕಳೊಂದಿಗೆ ಉತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳುವಂತೆ ಸಮುದಾಯ ಸದಸ್ಯರನ್ನು ಆಹ್ವಾನಿಸುವ ಮೂಲಕ ಶಿಕ್ಷಕರು ಉತ್ತಮ ಆಚರಣೆಗಳನ್ನು ಮುಂಚೂಣಿಗೆ ಬರುವಂತೆ ಮಾಡಬಹುದು. ಇದು ಸಮುದಾಯದೊಂದಿಗೆ ಉತ್ತಮ ಸಂಬಂಧವನ್ನು ಹೊಂದಲು ಸಹಾಯ ಮಾಡುವುದು ಮಾತ್ರವಲ್ಲದೆ ಉತ್ತಮ ಸಂಸ್ಕೃತಿ, ಆಚರಣೆಗಳು, ಜ್ಞಾನ ಮತ್ತು ಕಲೆ ಇತ್ಯಾದಿಯನ್ನು ಶ್ಲಾಘಿಸುವಂತೆ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುತ್ತದೆ. ಅದೇ ರೀತಿ ಪ್ರತಿಗಾಮಿ ಆಚರಣೆಗಳ ಬಗ್ಗೆ ಜಾಗೃತಿಯನ್ನು ಮೂಡಿಸುವುದರಿಂದ ಇವುಗಳನ್ನು ಶಾಲೆಯಲ್ಲಿ ಚರ್ಚೆ, ವಿಶ್ಲೇಷಣೆ ಮತ್ತು ಪರ್ಯಾಲೋಚನೆಗಳ ಮೂಲಕ ಕಾರ್ಯನಿರ್ವಹಿಸಲು ಕಾರ್ಯತಂತ್ರಗಳನ್ನು ವಿನ್ಯಾಸ–ಗೊಳಿಸಲು ಶಿಕ್ಷಕರಿಗೆ ಸಹಾಯವಾಗುತ್ತದೆ.

ಸದ್ಭಾವನಾ ಕಾರ್ಯಕ್ರಮವನ್ನು ಶಾಲಾ ವ್ಯವಸ್ಥೆಯನ್ನು ವಿಕಸನಗೊಳಿಸುವ ಆಚರಣೆ ಎಂದು ಪರಿಗಣಿಸಲಾಗಿದೆ. ಇದಕ್ಕೆ ಸಾರ್ವತ್ರಿಕವಾದ ಸ್ವರೂಪ ನೀಡಲು ಇದನ್ನು ಶಾಲೆಯ ಒಳಗೂ ಹೊರಗೂ ಪೋಷಿಸಬೇಕಾದ ಅಗತ್ಯವಿದೆ.

### ಪರಾಮರ್ಶನ:


Azim Premji Foundation (2022), Sadbhavna Vidyalay Margdarshika, Pilot Program, 2022-23

Government of India (2012), Values Education - A Handbook for Teachers, CBSE, New Delhi, India. Retrieved from http://cbseacademic.nic.in/web_material/ValueEdu/Value%20Education%20Kits.pdf

Government of India (1966), Report of the Education Commission, Ministry of Education, New Delhi

Government of India (1986), National Policy on Education, Ministry of Education, New Delhi

Government of India (2012), Education for Values in Schools – A Framework. Retrieved from http://www.ncert.nic.in/pdf_files/Framework_educationCOMPLETEBOOK.pdf

Government of India, Ministry of Health and Family Welfare (2016), National Mental Health Survey 2015-16. Retrieved from https://main.mohfw.gov.in/sites/default/files/National%20Mental%20Health%20Survey%2C%202015-16%20-%20Mental%20Health%20Systems_0.pdf

National Council for Education Research and Training (NCERT), (2000), National Curriculum Framework for School Education, Position Paper

National Council for Education Research and Training (NCERT), (2015), Position Paper, National Focus Paper on Education for Peace

National Crime Records Bureau (NCRB), (2015), Crime in India, Statistics. Retrieved from https://ncrb.gov.in/en/crime-india-year-2015

National Crime Records Bureau (NCRB), (2019), Crime in India, Statistics. Retrieved from https://ncrb.gov.in/en/crime-india-2019-0

Ramachandran V. and Naorem T. (2013), What it means to be a Dalit or tribal child in our schools: A synthesis of a six-state qualitative study, Economic and Political Weekly, November 2, 2013, vol xlviii no 44

Right of Children to free and compulsory Education Act (RTE), 2009, The Gazette of India, Ministry of Law and Justice



**ಸುರೇಶ್ ಸಾಹು** ಅವರು ಛತ್ತೀಸಗಢದ ರಾಯಪುರದಲ್ಲಿ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನೊಂದಿಗೆ ಕಾರ್ಯನಿರ್ವಹಿಸುತ್ತಿದ್ದಾರೆ. ಫೌಂಡೇಷನ್‌ನ ಕ್ಷೇತ್ರ ಸಂಶೋಧನೆಯಲ್ಲಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಭಿವೃದ್ಧಿ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಅವರು 20ಕ್ಕೂ ಹೆಚ್ಚು ವರ್ಷಗಳ ಅನುಭವವನ್ನು ಹೊಂದಿದ್ದಾರೆ. ಅವರನ್ನು suresh.sahu@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ಮಂಜುನಾಥ್ ಚಾಂದ್** | ಪರಿಶೀಲನೆ: **ನಾಗಮಣಿ ಎಸ್.ಎನ್.**